ನೀಲಗಿರಿ ಮರಗಳನ್ನು ನೆಡುವುದರಿಂದ ಹಾಗೂವ ಅಪಾಯ

೧೯೬ (೨೭೮) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿ (ಕೈಗಾರಿಕೆ ಲಾಭಗಳಿಸುವ ಸಲುವಾಗಿ) ಎಷ್ಟು ಎಕರೆ ಪ್ರದೇಶದಲ್ಲಿ ನೀಲಗಿರಿ ಮರಗಳನ್ನು ನೆಡಲಾಗಿದೆ ?

ಆ) ನೀಲಗಿರಿ ಮರಗಳು ಭೂಮಿಯಲ್ಲಿ ನೀರಿನ ಮಟ್ಟವನ್ನು ಕೆಳಕ್ಕೆ ಇಳಿಸಲು ಕಾರಣವೇನೆಂಬ ತಜ್ಞರ ಅಭಿಪ್ರಾಯವು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ನೀಲಗಿರಿ ಮರಗಳನ್ನು ಕೈಗಾರಿಕೋದ್ಯಮಿಗಳಿಗೆ ಲಾಭ ತರುವ ಉದ್ದೇಶದಿಂದ ಬೆಳೆಸಿಲ್ಲ. ಆದರೂ ಅರಣ್ಯ ಇಲಾಖೆಯು ೧,೦೩,೭೩೧ ಹೆಕ್ಟೇರಿನಷ್ಟು ಪ್ರದೇಶದಲ್ಲಿ ನೀಲಗಿರಿ ಮರಗಳನ್ನು ಮತ್ತು ಮಿಶ್ರಿತ ಇತರೇ ಜಾತಿಯ ಮರಗಳನ್ನು ಬೆಳೆಸಿರುತ್ತಾರೆ.

ಆ) ರಾಜ್ಯದಲ್ಲಿ ಬೆಳೆಸಿರುವ ನೀಲಗಿರಿ ಮರಗಳ ತೋಪುಗಳಿಂದ ಭೂಮಿಯಲ್ಲಿ ನೀರಿನ ಮಟ್ಟವು ಕೆಳಕ್ಕೆ ಇಳಿಯುವುದಿಲ್ಲವೆಂದು ತಿಳಿದು ಬಂದಿದೆ.

ಇ) ಮೇಲೆ ಹೇಳಿದ ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಅರಣ್ಯ ನಾಶವಾಗುವುದನ್ನು ತಡೆಗಟ್ಟುವುದು

೧೯೭ (೧೦೮) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ :—

ಅ) ಅರಣ್ಯ ನಾಶವಾಗುವುದನ್ನು ತಡೆಗಟ್ಟಲು ಸರ್ಕಾರದವರು ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ?

ಆ) ಕಳೆದ ೬ ತಿಂಗಳಿಂದ ಅಕ್ರಮ ಸಾಟು, ಶ್ರೀಗಂಧ ಮುಂತಾದ ಮರಮುಟ್ಟುಗಳನ್ನು ವಶ ಪಡಿಸಿಕೊಂಡ ಸರಕಿನ ಮೌಲ್ಯವೆಷ್ಟು ?

ಇ) ಎಷ್ಟು ಜನ ಅಕ್ರಮ ಕಡಿತಲೆ ಸಾಗಾಣಿಕೆದಾರರಿಗೆ ಶಿಕ್ಷೆ ಆಗಿದೆ ? ವಿವರಗಳನ್ನು ನೀಡುವುದು.

ಶ್ರೀ ಬಿ. ಎ. ಜೀವಿಜಯ (ಮಾನ್ಯ ಅರಣ್ಯ ರಾಜ್ಯ ಸಚಿವರು).—

ಅ) ೧. ಅಕ್ರಮವಾಗಿ ಅರಣ್ಯ ಸಂಪತ್ತು ನಾಶವಾಗುವುದನ್ನು ತಡೆಗಟ್ಟಲು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ರಾಜ್ಯ ಸರ್ಕಾರವು ಈ ಕೆಳಗೆ ನಮೂದಿಸಿರುವಂತಹ ಕಾಯ್ದೆ ಮತ್ತು ನಿಯಮಗಳ ವ್ಯಾಪ್ತಿಯೊಳಗೆ ಅಧಿಕಾರವನ್ನು ನೀಡಲಾಗಿದೆ.

ಅ) ಕರ್ನಾಟಕ ಅರಣ್ಯ ಕಾಯ್ದೆ, ೧೯೬೩ ಮತ್ತು ಕರ್ನಾಟಕ ಅರಣ್ಯ ನಿಯಮಗಳು, ೧೯೬೯.

ಆ) ಕರ್ನಾಟಕ ಮರಗಳ ಸಂರಕ್ಷಣೆ ಕಾಯ್ದೆ ೧೯೬೫, ಮತ್ತು

ಇ) ವನ್ಯ ಪ್ರಾಣಿಗಳ ಸಂರಕ್ಷಣಾ ಕಾಯ್ದೆ ೧೯೭೨ ಮತ್ತು ನಿಯಮಗಳು, ೧೯೭೩. ಅರಣ್ಯ ಇಲಾಖೆಯ ಅಧಿಕೃತ ಅಧಿಕಾರಿಗಳಿಗೆ ಕಳ್ಳಸಾಗಾಣಿಕೆಯಲ್ಲಿ ಸಿಕ್ಕ ಅರಣ್ಯ ಉತ್ಪನ್ನ ಮತ್ತು ಕಳ್ಳಸಾಗಾಣಿಕೆಯಲ್ಲಿ ಬಳಸಿದಂತಹ ವಾಹನಗಳು, ಪ್ರಾಣಿಗಳು ಹಾಗೂ ಉಪಕರಣಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕರ್ನಾಟಕ ಅರಣ್ಯ ಕಾಯ್ದೆಯ ೭೧–ಎ ನೇ ಕಲುಮಿನ ಪ್ರಕಾರ ಅಧಿಕಾರ ನೀಡಲಾಗಿದೆ.

ಅನಧಿಕೃತವಾಗಿ ಅರಣ್ಯದಲ್ಲಿ ಜಾಗವನ್ನು ಆಕ್ರಮಿಸಿಕೊಂಡಂತಹವರನ್ನು ಅಂತಹ ಜಾಗದಿಂದ ಉಚ್ಚಾಟಿಸಲು ಕರ್ನಾಟಕ ಅರಣ್ಯ ಕಾಯ್ದೆಯ ೬೪–ಎ ಕಲಮಿನೊಳಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮೇಲ್ಪಟ್ಟ ಅಧಿಕಾರಿಗಳಿಗೆ ಅಧಿಕಾರವಿರುತ್ತದೆ.

ಶ್ರೀಗಂಧದ ಕಳ್ಳ ಸಾಗಾಣಿಕೆಯಲ್ಲಿ ಸಿಕ್ಕಿಕೊಂಡಂತಹ ಅಪರಾಧಿಗಳನ್ನು ನ್ಯಾಯಾಲಯದ ಮೊರೆ ಹೊಕ್ಕು ಶಿಕ್ಷಿಸಲು ಅಧಿಕಾರಿಗಳಿಗೆ ಅವಕಾಶವಿದೆ. ಕರ್ನಾಟಕ ಅರಣ್ಯ ಕಾಯ್ದೆಯ ೮೬ನೇ ಕಲಮಿನ ಪ್ರಕಾರ ಅಪರಾಧಿಗಳಿಗೆ ಮೂರು ವರ್ಷಕ್ಕೆ ಕಡಿಮೆಯಿಲ್ಲದ ಜೈಲುವಾಸದೊಂದಿಗೆ ಹತ್ತು ಸಾವಿರ ರೂಪಾಯಿ ದಂಡ (ಮೊದಲ ಬಾರಿ ಸಿಕ್ಕಂತಹ ಅಪರಾಧಿಗಳಿಗೆ) ಮತ್ತು ಐದು ವರ್ಷಕ್ಕೆ ಕಡಿಮೆಯಿಲ್ಲದ ಜೈಲುವಾಸದೊಂದಿಗೆ ಇಪ್ಪತ್ತು ಸಾವಿರ ರೂಪಾಯಿ ದಂಡ (ಎರಡನೇ ಬಾರಿ ಮತ್ತೆ ತದನಂತರ ಸಿಕ್ಕಿಕೊಂಡಂತಹ ಅಪರಾಧಿಗಳಿಗೆ) ಶಿಕ್ಷೆ ವಿಧಿಸಲು ಅವಕಾಶವಿದೆ.

೨. ಪ್ರಸ್ತುತ ಅರಣ್ಯ ಸಿಬ್ಬಂದಿಯ ಜೊತೆಗೆ ನಮ್ಮ ರಾಜ್ಯದಲ್ಲಿ ಅರಣ್ಯ ಇಲಾಖೆಯ ಒಟ್ಟು ಹದಿನಂಟು ಅರಣ್ಯ ಸಂಚಾರಿ ದಳಗಳು ಕೆಲಸ ಮಾಡುತ್ತಿವೆ. ಈ ಸಂಚಾರಿ ದಳಗಳ ಮುಖ್ಯ ಕಾರ್ಯ ಅರಣ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಕಳ್ಳಸಾಗಾಣಿಕೆದಾರರನ್ನು ಕಾನೂನಿನ ರೀತ್ಯ ಸದೆಬಡೆಯುವುದು. ಇದರ ಬಗ್ಗೆ ಡಿ.ಐ.ಜಿ. ಸಿ.ಐ.ಡಿ. (ಫೋರೆಸ್ಟ್) (ಅರಣ್ಯ) ವಿಭಾಗವೂ ಸಹ ಸೃಷ್ಟಿಸಲಾಗಿದೆ.

೩. ಅಕ್ರಮವಾಗಿ ಅರಣ್ಯ ಸಂಪತ್ತು ನಾಶವಾಗುವುದನ್ನು ದಕ್ಷತೆಯಿಂದ ತಡೆಗಟ್ಟಲು ಇಲಾಖೆಯು ತನ್ನ ಸಿಬ್ಬಂದಿಗೆ ಒಟ್ಟು ಎರಡು ನೂರು ಬಂದೂಕುಗಳನ್ನು ಮತ್ತು ಅರವತ್ತಾರು ವೈರ್‌ಲೆಸ್ ಸೆಟ್‌ಗಳನ್ನು ಕೊಡಲಾಗಿದೆ.

ಆ) ಕಳೆದ ೬ ತಿಂಗಳಿಂದ ಅಕ್ರಮ ಸಾಟು, ಶ್ರೀಗಂಧ ಮುಂತಾದ ಮರಮುಟ್ಟುಗಳನ್ನು ವಶಪಡಿಸಿಕೊಂಡ ಸರಕಿನ ಮೌಲ್ಯ ಈ ಕೆಳಗೆ ನಮೂದಿಸಿದಂತಿರುತ್ತದೆ :

೧.	ಶ್ರೀಗಂಧದ ಮರ	ರೂ. ೨೪,೩೪,೯೯೮–೦೦
೨.	ಇತರೇ ಜಾತಿಯ ಮರ	ರೂ. ೧೩,೩೮,೬೫೮–೨೪
	ಜುಮ್ಲಾ	ರೂ. ೩೭,೭೩,೬೫೬–೨೪

ಇ) ೪೩ ಜನರು.

ಅಫ್‌ಜಲ್‌ಪೂರ ತಾಲ್ಲೂಕಿನ ಸೊನ್ನಗ್ರಾಮದಬಳಿ ಭೀಮಾ ನದಿಯಿಂದ ಏತಾ ನೀರಾವರಿ ಯೋಜನೆ

೧೯೮ (೨೧೬) ಶ್ರೀ ಹನುಮಂತರಾವ್ ದೇಸಾಯಿ (ಅಫ್‌ಜಲ್‌ಪೂರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ:—

ಅ) ಅಫ್‌ಜಲ್‌ಪೂರ ತಾಲ್ಲೂಕಿನ ಸೊನ್ನದ ಹತ್ತಿರ ಭೀಮಾನದಿ ಮೇಲ್ದಂಡೆ ಯೋಜನೆ ಬಗ್ಗೆ ಜನತೆಯಿಂದ ಬೇಡಿಕೆಗಳೇನಾದರೂ ಬಂದಿದೆಯೇ?

ಆ) ಈ ಯೋಜನೆಯ ಬಗ್ಗೆ ಸರ್ವೆ ಕಾರ್ಯವೇನಾದರೂ ಆಗಿದೆಯೇ?

ಇ) ಹಾಗಿದ್ದಲ್ಲಿ ಸದರಿ ಯೋಜನೆಯ ವೆಚ್ಚ ಎಷ್ಟು?

ಈ) ಈ ಯೋಜನೆಯಿಂದ ಎಷ್ಟು ಎಕರೆ ಜಮೀನು ನೀರಾವರಿ ಆಗಲಿದೆ?